<u>ಕರ್ನಾಟಕ ವಿಧಾನ ಪರಿಷತ್ತು</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1980
ಸದಸ್ಯರ ಹೆಸರು : ಶ್ರೀ ರಾಜೇಂದ್ರ ರಾಜಣ್ಣ
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 16-03-2022
ಉತ್ತರಿಸುವ ಸಚಿವರು : ಕಂದಾಯ ಸಚಿವರು

ಪ್ರಶ್ನೆ	ಉತ್ತರ
(ಅ) ತುಮಕೂರು ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಿಂದ ಸುರಿದ ಅಕಾಲಿಕ ಮಳೆಯಿಂದಾಗಿ ಮನೆಗಳನ್ನು ಕಳೆದುಕೊಂಡ ಕುಟುಂಬಗಳೆಷ್ಟು;	ತುಮಕೂರು ಜಿಲ್ಲೆಯಲ್ಲಿ 2020ನೇ ಸಾಲಿನಲ್ಲಿ ಅಕಾಲಿಕ ಮಳೆಯಿಂದ ಯಾವುದೇ ಮನೆ ಹಾನಿಯಾಗಿರುವುದಿಲ್ಲ. 2021ನೇ ಸಾಲಿನಲ್ಲಿ ಅಕಾಲಿಕ ಮಳೆಯಿಂದ 1684 ಮನೆಗಳ ಹಾನಿಯಾಗಿರುತ್ತದೆ.
(ಆ) ಮನೆ ಕಳೆದುಕೊಂಡ ಸಂತ್ರಸ್ಥ ಕುಟುಂಬಗಳಿಗೆ ಪುನರ್ವಸತಿಯನ್ನು ಕಲ್ಪಿಸಲಾಗಿದೆಯೇ; ಹಾಗಿದ್ದಲ್ಲಿ ಎಷ್ಟು ಕುಟುಂಬಗಳಿಗೆ ಸದರಿ ಸೌಲಭ್ಯವನ್ನು ಕಲ್ಪಿಸಲಾಗಿದೆ.	ಅತಿವೃಷ್ಟಿಯಿಂದ ಮನೆಹಾನಿಯಾದ ಸಂತ್ರಸ್ಥರು ಸ್ವತಃ ತಾವೇ ಮನೆ ನಿರ್ಮಾಣ ಮಾಡಿಕೊಳ್ಳಬೇಕಾಗಿದ್ದು, ಸರ್ಕಾರದಿಂದ ಆರ್ಥಿಕ ನೆರವು ನೀಡಲಾಗುತ್ತದೆ. ಸರ್ಕಾರದಿಂದ 32 ಪೂರ್ಣ ಹಾಗೂ 328 ತೀವ್ರ ಹಾನಿಯಾದ ಮನೆಗಳಿಗೆ ಪ್ರಥಮ ಕಂತಿನಲ್ಲಿ ರೂ.95,100/- ಪರಿಹಾರ ಪಾವತಿಸಲಾಗಿದೆ. ಸದರಿ ಅನುದಾನದಿಂದ ಮನೆ ಮಾಲೀಕರಿಗೆ ಮನೆ ನಿರ್ಮಾಣದ ಹಂತ-ಹಂತವಾರು ಪ್ರಗತಿಯನುಸಾರ ವಿವಿಧ ಕಂತುಗಳಲ್ಲಿ ಪರಿಹಾರ ಪಾವತಿಸಲಾಗುತ್ತಿದೆ. ಭಾಗಶಃ ಹಾನಿಯಾದ 1324 ಮನೆಗಳ ಮಾಲೀಕರಿಗೆ ಒಂದೇ ಕಂತಿನಲ್ಲಿ ತಲಾ ರೂ.50,000/- ದಂತೆ ಪಾವತಿಸಲಾಗಿದೆ.
(ಇ) ಇನ್ನೂ ಎಷ್ಟು ಕುಟುಂಬಗಳಿಗೆ ಪುನರ್ವಸತಿ ಸೌಲಭ್ಯ ಕಲ್ಪಿಸುವುದು ಬಾಕಿಯಿದೆ; (ತಾಲ್ಲೂಕುವಾರು ಮಾಹಿತಿಯನ್ನು ನೀಡುವುದು)	
(ಈ) ಬಾಕಿ ಇದ್ದಲ್ಲಿ, ಯಾವ ಕಾರಣಗಳಿಂದ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು? (ಮಾಹಿತಿ ನೀಡುವುದು)	ಉದ್ಭವಿಸುವುದಿಲ್ಲ.

ಕಂಇ 116 ಟಿಎನ್ಆರ್ 2022

(ಆರ್. ಅಶೋಕ)
ಕಂದಾಯ ಸಚಿವರು